

# ಬಹೂಪಯೋಗಿ ಶಿವನಿ ಮರ

ಬೆನಕನಹಳ್ಳಿ ಶೇಖರ್‌ಗೌಡ

ಶಿವನಿ ಮರದ ಕಾಂಡದಿಂದ ನಾನಾ ರೀತಿಯ ಕೆತ್ತನೆಗಳನ್ನು ಮಾಡಿಕೊಳ್ಳುವುದು ಸುಲಭ. ಈ ಮರ ದೇಶದ ಎಲ್ಲೆಡೆಯೂ ಕಂಡು ಬರುತ್ತದೆ. ಭಾರತದಾದ್ಯಂತ ಬೆಳೆಯುವ ಶಿವನಿ ಮರವನ್ನು ಕನ್ನಡದಲ್ಲಿ ಕೂಲಿ ಮರ, ಕುಮಳು ಮರ ಎನ್ನುತ್ತಾರೆ.

ಪೀಠೋಪಕರಣ, ಸಂಗೀತ ಉಪಕರಣಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಮರಕ್ಕೆ ಗೆದ್ದಲು ಹಿಡಿಯುವುದು ಕಡಿಮೆ. ಗುಡಿಗಾರರು ಕೆತ್ತನೆಗೆ ಇದನ್ನು ಇಷ್ಟ ಪಡುತ್ತಾರೆ.

ಭಾರತೀಯ ಆಯುರ್ವೇದ ಪರಂಪರೆಯಲ್ಲಿ ಹೆಸರಿಸಲಾದ ಮರವಿದು. ವಾತದೋಷ ನಿವಾರಕ, ವಾತ ನಿವಾರಕ ಎಂದೂ ಇದನ್ನು ಗುರುತಿಸಲಾಗುತ್ತದೆ. ಚರಕ ಮುನಿಗಳ ಪ್ರಕಾರ ಸೋತಹರ. ಚರ್ಮದ ಉರಿಯನ್ನು ನಿವಾರಿಸುತ್ತದೆ.

ಹಿಮಾಲಯ, ನೀಲಗಿರಿ ಪರ್ವತ, ಪೌರಾತ್ಯ ದೇಶಗಳಲ್ಲಿ ಮತ್ತು ಪಶ್ಚಿಮ ಘಟ್ಟಗಳಲ್ಲಿ ಬೆಳೆಯುತ್ತದೆ. ಅಸ್ಸಾಂ ರಾಜ್ಯದಾದ್ಯಂತ ಕಂಡು ಬರುತ್ತದೆ. 20 ಮೀಟರ್‌ವರೆಗೆ ಬೆಳೆಯುತ್ತದೆ. ತೊಗಟೆ ಬೂದು ಬಿಳಿ ಬಣ್ಣ. ಸಣ್ಣ ಸಣ್ಣ ಟೊಂಗೆಗಳು ಮರದಿಂದ ಎದ್ದು ಬಂದಂತೆ ಕಾಣಿಸುತ್ತವೆ. ಮೇ ತಿಂಗಳಿನಿಂದ ಜೂನ್ ತಿಂಗಳಿನ ಅವಧಿಯಲ್ಲಿ ಕಾಯಿ ಬಿಟ್ಟು ಹಣ್ಣಾಗುತ್ತದೆ.

ಶ್ರೀ ಪರ್ನಿ ತೈಲ, ಶ್ರೀ ಪರ್ನಾದಿ ಕ್ವಾತ, ಬೃಹತ್ ಪಂಚಮೂಲ ಕ್ವಾತಗಳಲ್ಲಿ ಬಳಸುತ್ತಾರೆ. ಎಲೆಯ ರಸವನ್ನು ತಲೆನೋವಿಗೆ ಬಳಸುತ್ತಾರೆ. ಹಾವು ಕಡಿದಾಗ ಶಿವನಿ ಚಕ್ಕೆಯ ರಸವನ್ನು ಕಷಾಯ ಮಾಡಿ ಕುಡಿಸುವವರಿದ್ದಾರೆ.

ಇದರ ಸಸ್ಯ ಶಾಸ್ತ್ರೀಯ ಹೆಸರು ಗೆಮ್ಮೆಲಿಯ ಅರ್ಬೋರಿಯ. ವರ್ಬಿನೆಸಿಯ ಕುಟುಂಬಕ್ಕೆ ಸೇರಿದೆ.

ಇದರ ಬೇರುಗಳು ಕಹಿಯಾಗಿವೆ. ವಾತ, ಕಫ ನಿವಾರಕ. ಹಸಿವನ್ನು ಉತ್ತೇಜಿಸುತ್ತದೆ. ಹಣ್ಣು ಸಿಹಿರುಚಿಯಿಂದ ಕೂಡಿದೆ. ಪಿತ್ತದೋಷ ನಿವಾರಕ. ರಕ್ತಪಿತ್ತದಲ್ಲಿ ಹಣ್ಣನ್ನು ಬಳಸುತ್ತಾರೆ. ಅತಿಯಾದ ಬಾಯಾರಿಕೆ ನಿವಾರಣೆಗೆ ಬಳಕೆ ಆಗುತ್ತದೆ. ಬೇರು ಲಘು ವಿರೇಚಕ ಗುಣವನ್ನು ಹೊಂದಿದೆ. ಶರೀರದ ಉಷ್ಣತೆಯನ್ನು ನಿವಾರಿಸುತ್ತದೆ. ಮೂತ್ರಾಂಗದ ಉರಿಗೆ ಇದರ ಎಲೆಯ ರಸವನ್ನು ಹಾಲು ಮತ್ತು ಸಕ್ಕರೆಯ ಜತೆ ಸೇವಿಸುತ್ತಾರೆ.